# ಶರಣು ಸಿದ್ಧವಿನಾಯಕ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru, page No. 14.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 03.
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 107.
4. **Note:** The lyrics mentioned without highlights are as per Ref. 2. The wordings given in yellow highlights are as per Ref. 1. The wordings in Ref. 3 are almost similar to Ref. 2.
5. **Note:** Singer has followed the lyrics as in Ref. 2.
6. **Note:** The Ankita is different in above references. We have considered Ref.1 as standard and taken that Ankita for listing.
7. **Note:** As per the foot notes in Ref. 1 many wordings which are used in Ref. 2 may be considered here. Hence, lyrics in Ref. 2 may be followed fully.

ರಾಗ: ಸುರುಟಿ ತಾಳ: ತ್ರಿವಿಡಿ

| | |
|---|---|
| ಶರಣು ಸಿದ್ಧ ವಿನಾಯಕ | ಶರಣು ಶರಣು ವಿನಾಯಕ |
| ಶರಣು ವಿದ್ಯ ಪ್ರದಾಯಕ ॥ ಪ ॥ | ಶರಣು ವಿದ್ಯ ಪ್ರದಾಯಕ |
| | |
| ಶರಣು ಪಾರ್ವತಿ ತನಯ ಮೂರುತಿ | ಶರಣು ಪಾರ್ವತಿ ತನಯ ಮೂರುತಿ |
| ಶರಣು ಮೂಷಕ ವಾಹನ ॥ ಅಪ ॥ | ಶರಣು ಮೂಷಕ ವಾಹನ |
| | |
| ನಿಟಿಲ ನೇತ್ರನ ದೇವಿ ಸುತನೇ | ನಿಟಿಲ ನೇತ್ರನ ವರದ ಸುತನೆ |
| ನಾಗಭೂಷಣ ಪ್ರಿಯನೇ | ನಾಗ ಯಜ್ಞೋಪವೀತನೇ |
| ತಟಿಲ್ಲ ತಾಂಕಿತ ಕೋಮಲಾಂಗನೆ | ಕಟಿಯ ಸೂತ್ರದ ಕೋಮಲಾಂಗನೆ |
| ಕರ್ಣ ಕುಂಡಲ ಧಾರನೆ ॥ 1 ॥ | ಕರ್ಣ ಕುಂಡಲ ಧಾರನೆ |
| | |
| ಬಟ್ಟ ಮುತ್ತಿನ ಪದಕ ಹಾರನೆ | ಬಟ್ಟ ಮುತ್ತಿನ ಪದಕ ಹಾರನೆ |

ಬಾಹು ಹಸ್ತ ಚತುಷ್ಟನೆ
ಇಟ್ಟ ತೊಡುಗೆಯ ಹೇಮ ಕಂಕಣ
ಪಾಶ ಅಂಕುಶಧಾರನೆ ॥ 2 ॥

ದಿವ್ಯ ಬಾಹು ಚತುಷ್ಟನೆ
ಇಟ್ಟ ತುಡುಗೆಯ ಹೇಮ ಕಂಕಣ
ಪಾಶ ಅಂಕುಶಧಾರನೆ

ಕುಕ್ಷಿ ಮಹಾ ಲಂಬೋದರನೆ
ಇಕ್ಷುಚಾಪನ ಗೆಲಿದನೆ
ಪಕ್ಷಿ ವಾಹನ ಸಿರಿ ಪುರಂದರ
ವಿಠಲನ ನಿಜ ದಾಸನೆ ॥ 3 ॥

ಕುಕ್ಷಿ ಮಹ ಲಂಬೋದರನೆ
ಇಕ್ಷುಚಾಪನ ಗೆಲಿದನೆ
ಪಕ್ಷಿ ವಾಹನನಾದ ಪುರಂದರ
ವಿಠಲನ ನಿಜ ದಾಸನೆ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ನಿಟಿಲ ನೇತ್ರನ ದೇವಿ** – ಹಣೆಗಣ್ಣಿನವನ, ಎಂದರೆ ಶಿವನ, ಹೆಂಡತಿಯಾದ ಪಾರ್ವತಿ.

**ನಾಗಭೂಷಣಪ್ರಿಯ** – ಹಾವನ್ನು ಆಭರಣವಾಗಿ ಉಳ್ಳ ಶಿವನಿಗೆ ಪ್ರಿಯನಾದವನು; ಅವನ ಗಣಗಳ ಒಡೆಯನಾಗಿ.

**ಕಟಿ** = ನಡು

**ಕಟಿಕಟಾಂಗದ** – 'ಕಟಿ' ನಡುವು, 'ಕಟಾಂಗ' (ಕಟಾಹ ಎನ್ನುವುದರ ಅಪಭ್ರಂಶ), ಬೆಟ್ಟ; ದೊಡ್ಡಪಾತ್ರೆ, ಕಡಾಯಿ; ಎಂದರೆ ಬೆಟ್ಟದಂಥ ಹೊಟ್ಟೆಯುಳ್ಳವನು.

**ತಟಿಲ್ಲತೆ** = ಬಳ್ಳಿ ಮಿಂಚು, ಕೊಲ್ಮಿಂಚು

**ಸೂತ್ರ** = ಉಡುದಾರ

**ಬಟುವ** – ಗುಂಡಗಿರುವ.

**ಬಟ್ಟ** = ದುಂಡಗಾದ

**ತುಡುಗೆ** = ಆಭರಣ

**ಹಸ್ತಚತುಷ್ಟನೆ** – ಹಸ್ತಚತುಷ್ಟಯನೇ, ನಾಲ್ಕು ಕೈಗಳುಳ್ಳವನೇ.

**ಅಂಕುಶಧಾರನೆ**– ಅಂಕುಶಧರನೇ.

**ಕುಕ್ಷಿಮಹಾ ಲಂಬೋಧರನೆ** – ದೊಡ್ಡ ಹೊಟ್ಟೆಯವನೇ.

**ಇಕ್ಷುಚಾಪನ ಗೆಲಿದನೆ–** ಕಬ್ಬನ್ನು ಬಿಲ್ಲಾಗಿ ಉಳ್ಳ ಮನ್ಮಥನನ್ನು ಚೆಲುವಿನಲ್ಲಿ ಗೆದ್ದವನೆ.

**ಪಕ್ಷಿವಾಹನ –** ಗರುಡನನ್ನೇರಿ ಬರುವವ, ವಿಷ್ಣು

**Classification:** Keerthane
**Ankita:** Purandara Vittala
**Location:** NA
**Category:** Ganesha Stuti
**Sub-Category:** ganesha, Parvati, ili, pakshi, bangara, kivi, divya, kai, vidya, muttu, hAra, abharana,
**Pravachana:** NA
**Explanation:** Dr. Vijayendra Desai, Dharwad